International Journal of Kannada Research 2019; 5(2): 173-175




International Journal of Kannada Research
www.kannadajournal.com

**ISSN: 2454–5813**
IJKR 2019; 5(2): 173-175
© 2019 IJKR
www.kannadajournal.com
Received: 22-02-2019
Accepted: 24-03-2019

**ತಿಮ್ಮಾರೆಡ್ಡಿ. ಟಿ**
ಸಂಶೋಧಕರು
ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ
ಮಾನಸ ಗಂಗೋತ್ರಿ ಮೈಸೂರು
ವಿಶ್ವವಿದ್ಯಾನಿಲಯ

**Correspondence**
**ತಿಮ್ಮಾರೆಡ್ಡಿ. ಟಿ**
ಸಂಶೋಧಕರು
ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ
ಮಾನಸ ಗಂಗೋತ್ರಿ ಮೈಸೂರು
ವಿಶ್ವವಿದ್ಯಾನಿಲಯ

# ಚಾರುವಸಂತ ಕಾವ್ಯದಲ್ಲಿ ಪರಿಸರ ಕಾಳಜಿ

**ತಿಮ್ಮಾರೆಡ್ಡಿ. ಟಿ**

ಹಂಪನಾಗರಾಜಯ್ಯ ರವರು ತಮ್ಮ 76ನೇ ವಯಸ್ಸಿನಲ್ಲಿ ಚಾರುವಸಂತ ಎಂಬ ದೇಶಿ ಮಹಾಕಾವ್ಯವನ್ನು ರಚಿಸಿದ್ದಾರೆ. ಈ ಕಾವ್ಯದ ವಸ್ತು ಕ್ರಿ.ಶ. 8ನೆಯ ಶತಮಾನಕ್ಕೆ ಸೇರಿದ ಚಾರುದತ್ತ ಮತ್ತು ವಸಂತ ತಿಲಕೆಯರ ನಡುವಿನ ಪ್ರೇಮ, ಪ್ರಣಯದ ಕತೆ. ಈ ಕಥೆಯು  ಕನ್ನಡ ಸಂಸ್ಕೃತ ಅಲ್ಲದೆ ಅನ್ಯ ಭಾಷಾ ಸಾಹಿತ್ಯದಲ್ಲೂ ಪ್ರಚಲಿತವಿದೆ. ಪೈಶಾಚಿ ಭಾಷೆಯಲ್ಲಿನ ಗುಣಾಢ್ಯನ ಬೃಹಕಥಾದಲ್ಲಿ ಈ ಕಥೆಯ ಬೇರುಗಳಿದ್ದರೆ ಜಿನಸೇನಾಚಾರ್ಯರ ಸಂಸ್ಕೃತದಲ್ಲಿನ ಹರಿವಂಶ ಕಾವ್ಯದಲ್ಲಿ ಈ ಕಥೆಯ ನಿರೂಪಣೆಯು ಸ್ಪಷ್ಟವಾಗಿ ಕಂಡುಬರುತ್ತದೆ. ಕನ್ನಡದಲ್ಲಿ ಆದಿಗುಣವರ್ಮ, ಬಂಧುವರ್ಮ, ಕರ್ಣಪಾರ್ಯ, ನಾಗರಾಜ, ಮಹಾಬಲ, ಸಾಳ್ವ, ಮಂಗರಸ ಮೊದಲಾದವರ ಕಾವ್ಯಗಳಲ್ಲಿ ಈ ಕಥೆಯು ಕಾಣಿಸಿಕೊಳ್ಳುತ್ತದೆ. ಇಂತಹ ಪ್ರಾಚೀನವಾದ ಕಥೆಯ ವಸ್ತುವು ಹಂಪನಾ ಅವರ ಕೈಯಲ್ಲಿ ಈ ಕಥೆಯು ಕಥಾಮುಖಾಂಡ, ಸುಂದರಕಾಂಡ, ಉನ್ಮುಖಾಂಡ, ಉದ್ಯೋಗಕಾಂಡ, ಮತ್ತು ದ್ಯಾವಪೃಥ್ವೀಕಾಂಡ ಎಂಬ ಐದುಕಾಂಡಗಳಲ್ಲಿ ಹಂದರಗೊಂಡಿದೆ.

"ಇದು ರಾಜ ರಾಣಿ ಅರಮನೆ ಕುರಿತ ಕಾವ್ಯವಲ್ಲ. ಯುದ್ಧಮುಖಿ ಕಥನವೂ ಅಲ್ಲ. ಮನುಷ್ಯ ಸ್ವಬಾವದ ವಿನ್ಯಾಸದ ನರಿಗೆಗಳಲ್ಲಿ ಅನಾವರಣಗೊಳ್ಳುತ್ತ ಮತಾತೀತವಾಗಿ ಮಹೋನ್ನತ ಮಾನವೀಯ ಮೌಲ್ಯಗಳಿಂದ ಕೂಡಿದ ಜನಮುಖಿ ಹಾಗೂ ಸಮಾಜಮುಖಿ ಕಾವ್ಯ" ಎಂದು ಲೇಖಕರು ಮುನ್ನುಡಿಯಲ್ಲಿ ಹೇಳಿಕೊಂಡಿದ್ದಾರೆ. ಈ ಮಾತುಗಳು ಚಾರುವಸಂತ ಕಾವ್ಯದ ವಸ್ತುವಿಗಿಡಿದ ಕೈಗನ್ನಡಿಯಾಗಿದೆ.

ಕಥೆಯು ಈ ರೀತಿಯಾಗಿದೆ ಚಂಪನಗರದ ವರ್ತಕ ಶ್ರೇಷ್ಠನಾದ ಭಾನುದತ್ತ ಹಾಗೂ ದೇವಲಿಯರು ಜೈನಧರ್ಮದ ಅನುಯಾಯಿಗಳು. ಇವರ ಮಗನಾದ ಚಾರುದತ್ತ, ಸದ್ಗುಣಿಯೂ, ಸಕಲ ವಿದ್ಯಾ ಪಾರಂಗತನಾಗಿ ಬೆಳೆಯುತ್ತಾನೆ. ಯೌವನಕ್ಕೆ ಬಂದಾಗ ರೂಪವತಿಯಾದ ಮಿತ್ರಾವತಿ ಎಂಬುವವಳನ್ನು ವಿವಾಹವಾಗಿ ಸದಾ ವಿದ್ಯೆ ಶಾಸ್ತ್ರಾದಿಗಳ ಅಭ್ಯಾಸದಲ್ಲಿ ನಿರತನಾಗುತ್ತಾನೆ. ಈ ಕಾರಣದಿಂದ ಸಂಸಾರದ ಕಡೆಗೆ ಗಮನ ಹರಿಸುವುದಿಲ್ಲ. ಇದನ್ನು ಗಮನಿಸಿದ ತಾಯಿ ದೇವಿಲೆ ತನ್ನ ತಮ್ಮನಾದ ರುದ್ರದತ್ತನಲ್ಲಿ ಚಾರುದತ್ತನ ಮನಸ್ಸು ರಸಿಕತೆಯ ಕಡೆಗೆ ತಿರುಗುವಂತೆ ಮಾಡಬೇಕೆಂದು ಕೇಳಿಕೊಳ್ಳುತ್ತಾಳೆ.

ಅಕ್ಕನ ಮಾತಿನಂತೆ ರುದ್ರದತ್ತ ಸದಾ ಪುಸ್ತಕ ಹುಳವಾಗಿದ್ದ. ಚಾರುದತ್ತನನ್ನು ಹಂತ ಹಂತವಾಗಿ ತನ್ನಕಡೆ ಸೆಳೆದುಕೊಂಡು ಕೊನೆಯಲ್ಲಿ ವೇಶ್ಯೆಯರು ವಾಸವಿರುವ ಸ್ಥಳಕ್ಕೆ ಕರೆದುಕೊಂಡು ಹೋಗಿ ಪರಿಚಯವನ್ನು ಮಾಡಿಸುತ್ತಾನೆ. ಆನಂತರ ಚಾರುದತ್ತ ವಸಂತ ತಿಲಕೆ ಎಂಬ ಸುಂದರ ವೇಶ್ಯೆ ಕನ್ಯೆಯಲ್ಲಿ ಅನುರಕ್ತನಾಗಿ ತಂದೆ, ತಾಯಿ, ಹೆಂಡತಿ ಬಂಧು ಬಳಗ ಎಲ್ಲರನ್ನೂ ಮರೆಯುತ್ತಾನೆ. ಇಂತಹ ಸಮಯವನ್ನು ಬಳಸಿಕೊಂಡ ವಸಂತಿಲಕೆಯ ತಾಯಿ ಅನಾಮಿಕೆಯು ಚಾರುದತ್ತನ ಹಣ, ವಸ್ತು, ಒಡವೆಗಳನ್ನು ಚಾರುದತ್ತ ಮತ್ತು ವಸಂತತಿಲಕೆಗೆ ತಿಳಿಯದೆ ತನ್ನದಾಗಿಸಿಕೊಂಡು ಚಾರುದತ್ತನನ್ನು ನಿರ್ಗತಿಕನಾಗಿ ಮಾಡಿ ಅವನನ್ನು ಮನೆಯಿಂದ ಹೊರಹಾಕುತ್ತಾಳೆ. ವಸಂತತಿಲಕೆಯಿಂದ ದೂರವಾದ ಚಾರುದತ್ತನಿಗೆ ತನ್ನ ತಪ್ಪಿನ ಅರಿವಾಗಿ ಮನೆಗೆ ಮರಳಿ ಬರುತ್ತಾನೆ.

ಚಾರುದತ್ತನನ್ನು ಮನೆಯಿಂದ ಕಳುಹಿಸಿದ ವಿಷಯ ತಿಳಿದ ವಸಂತಿಲಕೆ ಪರಿಪರಿಯಾಗಿ ಹಲುಬುತ್ತಾಳೆ. ಕೊನೆಯಲ್ಲಿ ತನ್ನ ತಾಯಿಯ ಮನಸ್ಸನ್ನು ಪರಿವರ್ತಿಸಿ ಚಾರುದತ್ತನಿಂದ ಪಡೆದ ಒಡವೆ, ವಸ್ತು, ಧನ, ಕನಕಾದಿಗಳನ್ನು ಚಾರುದತ್ತನ ತಾಯಿ ದೇವಿಲೆಗೆ ಹಿಂದಿರಿಗಿಸುವುದರ ಮೂಲಕ ದೇವಿಲೆ ಮತ್ತು ಮಿತ್ರಾವತಿಯರ ಮನಸ್ಸು ಗೆದ್ದು ಚಾರುದತ್ತನನ್ನು ವಿವಾಹವಾಗುತ್ತಾಳೆ. ಮಿತ್ರಾವತಿ ಮತ್ತು ವಸಂತತಿಲಕರರು ಸಹಬಾಳ್ವೆ ಮಾಡುವರು. ಇದನ್ನೆಲ್ಲಾ ಕಂಡ ತಂದೆ ಭಾನುದತ್ತ ವಿರಕ್ತನಾಗಿ ಸನ್ಯಾಸಿಯಾಗುವನು. ಮತ್ತೊಂದು ಕಡೆ ಪಶ್ಚಾತಾಪ ಮಾಡಿಕೊಂಡ ಚಾರುದತ್ತ ತಂದೆಯ ವೃತ್ತಿಯಾದ

ವ್ಯಾಪಾರವನ್ನು ಮುಂದುವರೆಸಿ ಸಂಪತ್ತುಗಳಿಸಲು ವಿದೇಶಕ್ಕೆ ಪ್ರಯಾಣ ಬೆಳಸುತ್ತಾನೆ. ಪ್ರಯಾಣದ ಹಾದಿಯಲ್ಲಿ ಅನೇಕ ಕಷ್ಟ, ನಷ್ಟಗಳನ್ನು ಎದುರಿಸಿ ತನ್ನ ತಂದೆಗಳಿಸಿದ ಸಂಪತ್ತು, ಕೀರ್ತಿ ಎಲ್ಲವನ್ನೂ ಮರಳಿ ಪಡೆಯುವುದರ ಮೂಲಕ ವರ್ಣಿಕ ಶ್ರೇಷ್ಠನಾಗುತ್ತಾನೆ. ಇದು ಕಾವ್ಯವು ಹೆಣೆದುಕೊಂಡಿರುವ ಸ್ವರೂಪವಾಗಿದೆ.

ಚಾರುವಸಂತ ಕಾವ್ಯವು ಮೇಲ್ನೋಟಕ್ಕೆ ಚಾರುದತ್ತ ಮತ್ತು ವಸಂತತಿಲಕೆಯ ಪ್ರೇಮವನ್ನು ವೈಭವೀಕರಿಸುವ ರೀತಿಯಲ್ಲಿ ಕಂಡುಬಂದರೂ ಜೊತೆಜೊತೆಗೆ ಸಮಕಾಲೀನ ವಿಚಾರಗಳನ್ನು ಸಮೀಕರಿಸುವುದು ಕಾವ್ಯದ ಮತ್ತೊಂದು ವೈಶಿಷ್ಟ್ಯ. ಈ ಕಾವ್ಯದಲ್ಲಿ ಸಮಕಾಲೀನ ಅನೇಕ ವಿಚಾರಗಳನ್ನು ಚರ್ಚೆಗೆ ಒಳಪಡಿಸಲಾಗಿದೆ. ಅಂತವುಗಳಲ್ಲಿ 'ಪರಿಸರ ಕಾಳಜಿ'ಯೂ ಒಂದು. ಮಾನವರು ಉತ್ತಮ ಆರೋಗ್ಯವಂತ ಜೀವನವನ್ನು ನಡೆಸಲು ಪರಿಸರವು ಬಹುಮುಖ್ಯವಾಗುತ್ತದೆ. ಇಂತಹ ಪರಿಸರವನ್ನು ಇಂದು ಮಾನವ ತನ್ನ ವಿನೋದಕ್ಕಾಗಿ ಮತ್ತು ಐಶರಾಮಿ ಜೀವನದಿಂದಾಗಿ ನಾಶಮಾಡಲು ಹೊರಟಿದ್ದಾನೆ. ಚಂಪಾನಗರವು ನದಿ, ಹಳ್ಳ, ಕೊಳ್ಳ, ಕೆರೆ, ಬಾವಿ ಮರಗಿಡ ಪ್ರಾಣಿ ಪಕ್ಷಿಗಳಿಂದ ಸಮೃದ್ಧವಾದ ಪ್ರದೇಶವಾಗಿತ್ತು. ಇಂತಹ ಪ್ರದೇಶದಲ್ಲಿ ಕ್ಷತ್ರಿಯರು ತಮ್ಮ ವಿನೋದಕ್ಕಾಗಿ ಬೇಟೆಯಾಡಲು ಹೊರಟ ಸಂದರ್ಭದಲ್ಲಿ ಚಾರುದತ್ತನು

"ನಿಲ್ಲಿ ಗೆಳೆಯರೆ ತಾಳಿ ತಾಳ್ಮೆಯಿರಲಿ ಏಕಿಂತು
ಕೈದುಗಳ ಮೇಲುತ್ತುವಿರೀ ಪ್ರಾಣಿ ಸಂಕುಲ ವಿನಾಶಕ
ನಿಸರ್ಗವಿರುವುದು ನಮ್ಮೀ ಮನುಜಕುಲ ರಕ್ಷೆಗೆ
ಪಶು ಪಕ್ಷಿ ಕೀಟಗಳು ಪ್ರಕೃತಿಯ ಮಡಿಲೊಳಗೆ
ತಮ್ಮ ಪಾಡಿಗೆ ತಾವು ನೆಮ್ಮದಿಯಲಿ ಇರುವಾಗ
ನಮ್ಮ ವಿನೋದ ವಿಹಾರಕೆ ಗುರಿಯಾಗಬೇಕೆ?
ಯಾರ ತೀಟೆಯನು ತೀರಿಸಲೀ ಮೃಗಗಳ ಬೇಟೆ?"

ಮನುಷ್ಯನು ಉತ್ತಮ ಆರೋಗ್ಯವನ್ನು ಪಡೆಯಲು ಪ್ರಕೃತಿ ತುಂಬಾ ಅವಶ್ಯಕ. ಪ್ರಕೃತಿಯ ಒಂದು ಭಾಗವಾಗಿರುವ ಗಿಡ ಮರಗಳನ್ನು ಹೆಚ್ಚು ಹೆಚ್ಚು ಬೆಳಸಬೇಕು. ಆದರೆ ಬೆಳಸುವುದರ ಬದಲು ವಿವಿಧ ಕಾರಣಗಳಿಂದ ಗಿಡ ಮರಗಳನ್ನು ನಾಶ ಮಾಡಬೇಡಿ. ಹಾಗೆ ಮಾಡಿದರೆ ನಮ್ಮನ್ನು ನಾವು ನಾಶ ಮಾಡಿಕೊಡಂತೆ ಎಂಬುದು ಇಲ್ಲಿನ ತಾತ್ವಿಕತೆ. ಸರಕಾರ ಮನೆಗೊಂದು ಮರ ಊರಿಗೊಂದು ವನ, ಕಾಡು ಬೆಳಿಸಿ ನಾಡು ಉಳಿಸಿ ಎಂಬ ಘೋಷ ವಾಕ್ಯಗಳ ಮೂಲಕ ಸಸ್ಯ ಸಂಪತ್ತು ರಕ್ಷಣೆಗೆ ಮುಂದಾಗಿದೆ. ಪರಿಸರ ಸಂರಕ್ಷಣೆ ಎಂಬುದು ಪ್ರಭುತ್ವ ಮತ್ತು ಸಂಸ್ಥೆಯಿಂದ ಮಾತ್ರ ಸಾಧ್ಯವಿಲ್ಲ. ಅದು ಪ್ರತಿಯೊಬ್ಬ ವ್ಯಕ್ತಿಯ ಆದ್ಯ ಕರ್ತವ್ಯವಾಗಿರಬೇಕು. ಆಗ ಮಾತ್ರ ಗಿಡ, ಮರ, ಕಾಡುಗಳನ್ನು ಉಳಿಸಲು ಸಾಧ್ಯ.

ಮರ, ಗಿಡ, ಬಳ್ಳಿ, ದೈವ ಕೃಪೆಯಿಂದ ಬಂದಂತವು. ಮರ ಗಿಡ, ಬಳ್ಳಿ, ನೆಲ, ನೀರು, ಗಾಳಿ, ಪ್ರಾಣಿ, ಪಕ್ಷಿ ಎಲ್ಲವೂಗಳಿಗೂ ಒಂದು ನಂಟು ಇದೆ. ಒಂದು ಮರವನ್ನು ಕಡಿಯಬೇಕಾದರೆ ಎರಡು ಮರಗಳನ್ನು ನೆಟ್ಟು ನಂತರ ಒಂದು ಮರವನ್ನು ಕಡಿಯಬೇಕು. ಎಂಬ ಸಂದೇಶವನ್ನು ಚಾರುದತ್ತನು ಸಾರುತ್ತಾನೆ. ಈ ಊರಿಗೆ ಹಾಗೂ ಕಾಡು ಮಾಡಿದ ಕೇಡಾದರೂ ಏನು? ಮತ್ತು ಹಸಿರನ್ನು ನಾಶ ಮಾಡಿದರೆ ಜೀವನದ ಉಸಿರು ಉಳಿವು ಹೇಗೆ ಎಂದು ಹೇಳುವ ಸಂದರ್ಭದಲ್ಲಿ ಚಾರುದತ್ತನು ಈ ರೀತಿಯಾಗಿ ಪ್ರತಿಕ್ರಿಯಿಸುತ್ತಾನೆ.

"ಏಕಿಂತು ಕಿರುಚಿವಿರಿ ಅರಚುವಿರಿ ಹುಚ್ಚರಂತೆ
ಶಬ್ದ ಮಾಲಿನ್ಯವನೆಸಗದಿರಲದೆ ಲೇಸಂತೆ
ಬಲು ಕೆಡಕು ನೀರು ನೆಲಗಾಳಿ ಧ್ವನಿಯ ಮಲಿನತೆ
ಮುಂಬರುವ ಪೀಳಿಗೆಗೆ ಗೋಳವಾ ನರಕವಲ
ವಿನೋದ ಲಹರಿಗೀಡಾಗದಿರಲಿ ಜೀವಜಾಲ
ಕೊಲ್ಲದಿರಿ ಜಲಚರ ವನಚರ ಗಗನಚರಗಳನ್ನು
ಮಲಿನಗೊಳಿಸದೆ ಉಳಿಸುವುದು ನೆಲಜಲವಾಯುವನು
ಎಲ್ಲ ಜೀವಕು ನೆಲೆಯು ನೆಲವಿದು ಎಲ್ಲರಾಸ್ತಿ
ಕೊಲ್ಲುವುದು ಸಲ್ಲದು ಕೊಲ್ಲದುದೆ ಲೇಸು ನಮಗೆ
ಹೇಳಿ ಮಿಗಿಲಾವುದಿದೆ ಇಳೆಗೆ ಪ್ರಾಣಿದಯೆಗೆ
ಪ್ರಕೃತಿಯ ಸಹಜಗತಿಯಲಿ ಸೃಷ್ಟಿ ನಗುತಿರಲಿ
ಜೀವ ಪೋಷಣೆಯಲ್ಲಿ ಸುಲಭ ಸಾಧ್ಯವಹುದಿಲ್ಲ."

ನಮ್ಮ ಸುತ್ತಮುತ್ತಲಿನ ನೀರು, ಗಾಳಿ, ಭೂಮಿ ಎಲ್ಲವೂ ಇಂದು ಅತೀ ಹೆಚ್ಚು ಕಲುಷಿತಗೊಳ್ಳುತ್ತಿವೆ. ವಾಯು ಜೀವಧಾತು, ಗಾಳಿಯಿಲ್ಲದಿದ್ದರೆ ಜೀವಸಂಕುಲ ಒಂದು ಕ್ಷಣವೂ ಈ ಭೂಮಿಯ ಮೇಲೆ ಇರಲು ಸಾಧ್ಯವಿಲ್ಲ. ಇಂತಹ ವಾಯು ಮಾಲಿನ್ಯಗೊಳಿಸುತ್ತಿದ್ದಾರೆ. ಇದೇ ರೀತಿ ಶಬ್ಧ ಮಾಲಿನ್ಯ, ಜಲಮಾಲಿನ್ಯ ಭೂಮಾಲಿನ್ಯ ಮನುಷ್ಯನ ಮಾನಸಿಕ ನೆಮ್ಮದಿಯನ್ನು ಹಾಳುಮಾಡುತ್ತಿವೆ. ಈ ಮಾಲಿನ್ಯಗಳು ಕೇವಲ ಮನುಷ್ಯನಿಗಷ್ಟೇ ಅಲ್ಲದೆ ನೀರು, ಗಾಳಿ ಭೂಮಿಯಲ್ಲಿ ಜೀವಿಸುವ ಜೀವ ಸಂಕುಲಕ್ಕೂ ಸಹ ತೊಂದರೆ ಉಂಟುಮಾಡುತ್ತವೆ. ಪ್ರಕೃತಿಯು ಎಲ್ಲಾ ಜೀವರಾಶಿಗಳಿಗೆ ಆಧಾರ. ಇಂತಹ ಪ್ರಕೃತಿಯನ್ನು ನಾಶ ಮಾಡಬೇಡಿ, ಮುಂದಿನ ಪೀಳಿಗೆಗೆ ನಾವು ಅನುಭವಿಸಿದ ಪ್ರಕೃತಿಯನ್ನು ಉಳಿಸೋಣ ಎಂಬ ಸಂದೇಶನವನು ಈ ಕಾವ್ಯದ ಮೂಲಕ ಕೊಡುತ್ತಾರೆ.

ಚಾರುದತ್ತನ ಮದುವೆಯ ಸಮಯದಲ್ಲಿ ಮರಗಿಡಗಳ ಎಲೆಗಳನ್ನು ಕಿತ್ತುತಂದು ತಳಿರು ತೋರಣ ಕಟ್ಟಿ ಅಲಂಕಾರ ಮಾಡುವುದನ್ನು ವಿರೋಧಿಸುತ್ತಾ, ಮರಗಿಡಗಳ ಎಲೆಗಳ ಬದಲು ಬಣ್ಣ ಬಣ್ಣದ ಬಟ್ಟೆಯನ್ನು ಕಟ್ಟಿಸುವುದರ ಮೂಲಕ ಹೊಸ ಸಂಪ್ರದಾಯಕ್ಕೆ ನಾಂದಿಹಾಡುತ್ತಾನೆ. ಆ ಸಂದರ್ಭದಲ್ಲಿ

"ತಳಿರು ತೋರಣಾಲಂಕಾರಕೆಂದು ಕೀಳದಿರಿ
ಮರಗಿಡ ಕೊಂಬೆ ರೆಂಬೆಯ ಕತ್ತರಿಸಿ ತರಿಯದಿರಿ
ವೃಕ್ಷ ಸಂಪದವ ರಕ್ಷಿಸಿರಿ ಹರಸುವಳು ತಾಯಿ
ತರುಲತೆಗು ಜೀವವಿದೆ ನಮ್ಮಂತೆ ನೋವು ನಲಿವು
ಬಣ್ಣ ಬಣ್ಣದ ಬಟ್ಟೆಯಲಿ ಹೊಲಿಸಿ ಕಟ್ಟಿರುವೀ
ಸಾಲು ತೋರಣವ ಹರಿದು ಹಾಳು ಮಾಡದೆ ಮಡಿಸಿ
ಕಾಪಾಡಿ ಸತ್ರದಲಿಟ್ಟು ನಗರ ಕೇರಿಯೊಳಗೆ
ನಡೆವ ಶುಭಕಾರ್ಯಕ್ಕೆ ಕೊಡಿ ಮದುವೆಮುಂಜಿ ಹಬ್ಬಕ್ಕೆ
ಹಸಿರುವಾಣಿಯ ಕೀಳದಿರಿ ಇದನೆ ಕಟ್ಟಿ ಬಳಸಿ
ಮಾನವ ನೆದೆಯ ತಿದಿಯೊಳು ಹಸುರ ಬಸಿರದು ಉಸಿರು"

ಮರಗಿಡಗಳ ಎಲೆ ರಂಬೆ ಕೊಂಬೆಗಳನ್ನು ಕತ್ತರಿಸಿ ಪರಿಸರವನ್ನು ನಾಶ ಮಾಡಬೇಡಿ, ಹಾಗೂ ಮರಗಿಡಗಳಿಗೂ ಜೀವವಿದೆ. ಆದ ಕಾರಣ ಅವುಗಳಿಗೂ ನೋವಾಗುತ್ತದೆ ಎಂದು ಹೇಳುತ್ತಾ ಮರಗಿಡಗಳ ರಂಬೆ ಕೊಂಬೆಗಳ ಬದಲಿಗೆ ಬಣ್ಣ ಬಣ್ಣದ ಬಟ್ಟೆಯಿಂದ ತೋರಣವನ್ನು ಹಾಳುಮಾಡದೆ ಊರಿನ ಮದುವೆ ಮುಂಜಿ, ಹಬ್ಬ ಹರಿದಿನಗಳಿಗೆ ಬಳಸಿಕೊಳ್ಳಿ ಎನ್ನುತ್ತಾರೆ.

ಈ ರೀತಿಯಲ್ಲಿ ಚಾರುವಸಂತ ಕಾವ್ಯದುದ್ದಕ್ಕೂ ಪರಿಸರ

ಸಂರಕ್ಷಣೆಯ ಬಗ್ಗೆ ಚರ್ಚಿಸಲಾಗಿದೆ. ಪರಿಸರವನ್ನು ನಾಶ ಮಾಡಿದರೆ ನಮ್ಮ ಗೋರಿಯನ್ನು ನಾವೇ ತೋಡಿಕೊಂಡಂತೆ ಹಾಗೂ ಒಂದು ಮರವನ್ನು ಕಡಿಯಬೇಕಾದರೆ ಮೊದಲು ಎರಡು ಗಿಡಗಳನ್ನು ನೆಡಬೇಕು ಎಂಬ ಸಂದೇಶಗಳು ಪ್ರಸ್ತುತ ಸಮಾಜಕ್ಕೆ ಬಹುಮುಖ್ಯವಾಗುತ್ತವೆ. ಇದೇ ರೀತಿ ನೀರು, ಗಾಳಿ, ಶಬ್ಧ ಮತ್ತು ಭೂಮಿಯ ಮಾಲಿನ್ಯತೆಯನ್ನು ಕುರಿತು ಮಾತನಾಡುವುದು ಚಾರುದತ್ತನಿಗಿರುವ ಪರಿಸರ ಕಾಳಜಿಯನ್ನು ಪ್ರತಿಬಿಂಬಿಸುತ್ತವೆ. ಚಾರುದತ್ತನ ಕುಟುಂಬದ ರೀತಿಯಲ್ಲಿ ಎಲ್ಲರೂ ಯೋಚಿಸಬೇಕಾಗುತ್ತದೆ. ಈ ನಿಟ್ಟಿನಲ್ಲಿ ಯೋಚಿಸಿದರೆ ಮಾತ್ರ ನಾವು ಅನುಭವಿಸಿದ ನೀರು, ಗಾಳಿ, ಶಬ್ಧ, ಭೂಮಿ, ಮರ, ಗಿಡ, ಮುಂದಿನ ಜನಾಂಗವೂ ಕೂಡ ಅನುಭವಿಸಲಿ ಎಂಬುವುದನ್ನು ಅರಿತು ಪರಿಸರವನ್ನು ರಕ್ಷಿಸೋಣ. ಎಂಬ ಹಂಪನಾ ಅವರ ಅಭಿಪ್ರಾಯವನ್ನು ಸ್ವಾಗತಿಸೋಣ.

**ಗ್ರಂಥಋಣ**


1. ಹಂಪ ನಾಗರಾಜಯ್ಯ: ಚಾರುವಸಂತ, ಸ್ವಪ್ನ ಬುಕ್ ಹೌಸ್, ಬೆಂಗಳೂರು, 2012.
2. ಜಿ.ಎಸ್.ಉಪಾಧ್ಯ (ಸಂ) : ಪ್ರೊ.ಹಂಪಾನಾರ ಚಾರುವಸಂತ ಅವಲೋಕನ, ಸುಮುಖ ಪ್ರಕಾಶನ, ಬೆಂಗಳೂರು, 2006